# ದಿನಾಂಕ: 27.03.2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪಂಚಾಯತ್ ರಾಜ್), ರವರ ಉಪಸ್ಥಿತಿಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ವಿಡೀಯೋ ಸಂವಾದದ ನಡವಳಿ

ಇಲಾಖೆಯಿಂದ ಅನುಷ್ಠಾನಿಸಲಾಗುತ್ತಿರುವ ಪ್ರಮುಖ ಯೋಜನೆಗಳ ಪ್ರಗತಿ ಪರಿಶೀಲನೆಗಾಗಿ ನಿಗದಿಪಡಿಸಲಾಗಿದ್ದ ವಿಡೀಯೋ ಸಂವಾದ ಕಾರ್ಯಕ್ರಮವನ್ನು ಕೋವಿಡ್-19 ರ ಮಹತ್ವದ ಹಿನ್ನಲೆಯಲ್ಲಿ ವಿಷಯ ಸೂಚಿಯ ಬದಲಾವಣೆ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದು ಈ ಕೆಳಕಂಡ ಸಲಹೆ ಸೂಚನೆಗಳನ್ನು ನೀಡಿದರು.

1. 2019-20 ನೇ ಸಾಲಿನಲ್ಲಿ ನಿಗದಿಪಡಿಸಲಾದ ಆಯವ್ಯಯದಲ್ಲಿ ಈಗಾಗಲೇ ಬಿಡುಗಡೆ ಮಾಡಲಾದ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಲು ಅನುವಾಗುವಂತೆ ಜಿಲ್ಲಾ ಮಟ್ಟದಲ್ಲಿ ಕಾರ್ಯಪಾಲಕ ಅಭಿಯಂತರರು, ಗ್ರಾನೀಸ, ಪಿಆರ್ ಇಡಿ & ಪಿಎಂಜಿಎಸ್ ವೈ ಇವರುಗಳೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಪ್ರತಿ ನಿತ್ಯ ತುರ್ತು ಸಭೆಯನ್ನು ಕರೆದು ಪ್ರಗತಿ ಪರಿಶೀಲನೆ ನಡೆಸುವುದು.

   ಲೆ.ಶೀ. 4215 ರಡಿ ಈ ಸಾಲಿನಿಂದ ಖಜಾನೆ ಮೂಲಕ ವೆಚ್ಚ ಭರಿಸಬೇಕಾಗಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಈ ಬಗ್ಗೆ ವಿಶೇಷ ಕಾಳಜಿವಹಿಸುವುದು.

2. ಸದ್ಯದ ಕೋವಿಡ್-19 ರ ಪರಿಸ್ಥಿತಿಯಲ್ಲಿ ಫಲಾನುಭವಿಗಳಿಗೆ ಹೆಚ್ಚಿನ ಸಹಾಯ ಆಗುವಂತೆ ಸ್ವಚ್ಛ ಭಾರತ್ ಯೋಜನೆಯಡಿ ಈಗಾಗಲೇ ನಿರ್ಮಾಣಗೊಂಡಿರುವ ಶೌಚಾಲಯಗಳ ಬಿಲ್ಲು ಪಾವತಿಯನ್ನು ಆದ್ಯತೆ ಮೇಲೆ ಕೈಗೊಳ್ಳುವುದು.
3. ಕಛೇರಿಯಲ್ಲಿಯೇ ಕುಳಿತು ನಿರ್ವಹಿಸಬಹುದಾಂತಹ ಕೆಲಸಗಳಾದ ಕಾಮಗಾರಿಗಳ ಕಾರ್ಯಾದೇಶ, FTO, NOLB ಗಳ ಸೇರ್ಪಡೆ ಇತ್ಯಾದಿಗಳನ್ನು ನಿರ್ವಹಿಸುವುದು.

4. ಗ್ರಾಮೀಣ ಪ್ರದೇಶದಲ್ಲಿ ಕೋವಿಡ್-19 ರ ಸದ್ಯದ ಪರಿಸ್ಥಿತಿಯಲ್ಲಿ ಕೂಲಿಕಾರರಿಗೆ ದಿನ ನಿತ್ಯದ ದುಡಿಮೆಗೆ ಹಾಗೂ ಜೀವನಾಧಾರಕ್ಕೆ ನರೇಗಾ ಯೋಜನೆಯು ವರದಾನವಾಗಿದ್ದು ಅದನ್ನು ಸಮರ್ಪಕವಾಗಿ ಅನುಷ್ಠಾನಿಸಲು ಕ್ರಮವಹಿಸುವುದು.

5. ಸರ್ಕಾರದಿಂದ ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಕಾರರಿಗೆ ಕೆಲಸ ನೀಡಲು ಕ್ರಮ ಕೈಗೊಳ್ಳುವ ಕುರಿತು ದಿನಾಂಕ: 26.03.2020 ರಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ ನಮೂದಿಸಲಾದಂತೆ ಗ್ರಾಮಗಳಲ್ಲಿ ಹೆಚ್ಚು ಕೂಲಿ ಆಧಾರಿತ ಕಾಮಗಾರಿಗಳನ್ನು ಗುರುತಿಸಿ, ವೈಯಕ್ತಿಕ ಕಾಮಗಾರಿಗಳಿಗೆ ಆಧ್ಯತೆ ನೀಡಿ, 5 ಜನರಗಿಂತ ಹೆಚ್ಚು ಕೂಲಿಕಾರರು ಗುಂಪಾಗಿ ಕೆಲಸ ನಿರ್ವಹಿಸದಂತೆ, ಸಾಮಾಜಿಕ ಅಂತರ ಕಾಪಾಡಿಕೊಂಡು ಹಾಗೂ ಕಾರ್ಮಿಕರ ವಾಸಸ್ಥಳದ ಸಮೀಪವೇ ಕೆಲಸವನ್ನು ಒದಗಿಸುವ ಮೂಲಕ ಗ್ರಾಮೀಣ ಜನರಿಗೆ ನೆರವು ನೀಡಲು ಕರೆ ನೀಡಿದರು.

6. ಸದರಿ ಯೋಜನೆಯಡಿ ದಿನಗೂಲಿ ಪಾವತಿಗೆ ಕೇಂದ್ರದ ಅನುದಾನ ಬಾಕಿಯಿದ್ದರೂ ರಾಜ್ಯದಿಂದ ಮುಂಗಡವಾಗಿ ಅನುದಾನ ಪಡೆಯಲು ಕ್ರಮವಹಿಸಲಾಗುತ್ತಿರುವ ಬಗ್ಗೆ ತಿಳಿಸಲಾಯಿತು.

7. ಕೂಲಿಕಾರರಿಗೆ ಜಾಬ್ ಕಾರ್ಡ ಗಳನ್ನು ವಿತರಿಸದಿರುವುದರ ಬಗ್ಗೆ ದೂರುಗಳು ಬರುತ್ತಿದ್ದು,ಈ ಬಗ್ಗೆ ಅಗತ್ಯ ಕ್ರಮವಹಿಸುವುದು.

8. ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿಗಳಲ್ಲಿ ಕಡ್ಡಾಯವಾಗಿ ಲಭ್ಯವಿರುವುದನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಖಚಿತ ಪಡಿಸಿಕೊಳ್ಳುವುದು.

9. ಬೇಸಿಗೆ ಪ್ರಾರಂಭವಾದ ಹಿನ್ನಲೆ ಹಾಗೂ ಕೋವಿಡ್ -19 ರ ಪರಿಸ್ಥಿತಿಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಹೆಚ್ಚಿನ ಮಹತ್ವ ನೀಡಬೇಕಿರುವುದನ್ನು ಮನಗಾಣುವುದು.

10. ಕುಡಿಯುವ ನೀರಿನ ಸರಬರಾಜುನಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳುವುದು.

11. ಗ್ರಾಮಗಳಲ್ಲಿ ಕುಡಿಯುವ ನೀರಿನ ಮೋಟಾರುಗಳ ದುರಸ್ಥಿಯಿದ್ದಲ್ಲಿ, ಜಿಲ್ಲಾಧಿಕಾರಿಗಳು ಹಾಗೂ ಇತರ ಸಂಬಂಧಪಟ್ಟ ಇಲಾಖೆಗಳ ನೆರವಿನೊಂದಿಗೆ

ಮೋಟಾರ್ ರೀವೈಂಡಿಂಗ್ ಶಾಪ್ ಗಳನ್ನು ತೆರಿಸಿ ತುರ್ತಾಗಿ ದುರಸ್ಥಿಗೊಳಿಸಲು ಕ್ರಮವಹಿಸುವುದು.

12. ಕುಡಿಯುವ ನೀರಿನ ಅಭಾವವಿರುವಂತಹ ಜಿಲ್ಲೆಗಳಲ್ಲಿ ಟಾಸ್ಕ ಫೋರ್ಸ್ ಅನುದಾನವನ್ನು ಬಳಸಲು ಹಾಗೂ ಹೆಚ್ಚಿನ ಅನುದಾನದ ಅವಶ್ಯಕತೆಯಿದ್ದಲ್ಲಿ ಪ್ರಸ್ತಾವನೆ ಸಲ್ಲಿಸುವುದು.

13. ಕೋವಿಡ್ -19 ವ್ಯಾಪಕವಾಗಿ ಹರಡದಂತೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮೀಣ ಕಾರ್ಯಪಡೆ ರಚಿಸುವಂತೆ (Village Taskforce) ದಿನಾಂಕ: 23.03.2020 ಸುತ್ತೋಲೆ ಹೊರಡಿಸಲಾಗಿದ್ದು, ಸದರಿ ಸುತ್ತೋಲೆಯನ್ನು ಪರಿಷ್ಕರಿಸಿ ಇನ್ನೂ ವಿಸ್ತೃತ ಮಾರ್ಗ ಸೂಚಿಗಳನ್ನು ನೀಡಲಾಗುವುದು.

14. ಗ್ರಾಮಗಳಲ್ಲಿ ಹಾಲು ಸಂಗ್ರಹಣಾ ಘಟಕಗಳು, ನೀರು ಶುದ್ಧೀಕರಣ ಘಟಕಗಳು ಹಾಗೂ ಇನ್ನಿತರ ಜನಸಂದಣಿಯಿರುವಂತಹ ಪ್ರದೇಶಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮದುವೆ, ಜಾತ್ರೆ, ಮೆರವಣಿಗೆ, ಸಂತೆ ಹಾಗೂ ಇತರೆ ಗುಂಪು ಸೇರುವ ಚಟುವಟಿಕೆಗಳ ನಿಯಂತ್ರಣ, ಅಂಗನವಾಡಿಯಲ್ಲಿ ನೋಂದಾಯಿತ ಮಕ್ಕಳು, ಮಹಿಳೆಯರು, ಬಾಣಾಂತಿಯರಿಗೆ ಅವರ ಮನೆಗಳಿಗೆ ಪಡಿತರ ವಿತರಣೆ, ಅವಶ್ಯಕತೆಯದ್ದಲ್ಲಿ ಸಾಮೂಹಿಕ ಕ್ವಾರಂಟೈನ್ ಗೆ ವ್ಯವಸ್ಥೆ. ಅಗತ್ಯ ವಸ್ತುಗಳ (ದವಸ, ಧಾನ್ಯ, ಹಾಲು ತರಕಾರಿ, ಔಷದಿಗಳು, ಸೋಪು ಸಾಬೂನು ಇತ್ಯಾದಿ) ಸಮರ್ಪಕ ವಿತರಣೆ ಮುಂತಾದ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದು.

15. ಸ್ವಚ್ಛತಾಗಾರರು ಮತ್ತು ಘನ ತ್ಯಾಜ್ಯ ನಿರ್ವಹಣಾ ಸಿಬಂದ್ಧಿಗಳಿಗೆ ಕಡ್ಡಾಯವಾಗಿ ಸುರಕ್ಷತಾ ಸಾಮಗ್ರಿಗಳಾದ ಮಾಸ್ಕ್, ಗ್ಲೌಸ್ (ಕೈ ಕವಚ) ಮತ್ತು ಫುಟ್ ವೇರ್ ಗಳನ್ನು ಒದಗಿಸುವುದು.

16. ಸ್ಥಳೀಯವಾಗಿ ಮಾಸ್ಕಗಳ ತಯಾರಿಕೆಗೆ ಉತ್ತೇಜಿಸುವುದು ಒಳಿತಾದರೂ ಗುಣಮಟ್ಟ ಕಾಯ್ದುಕೊಳ್ಳಲು ತಾಂತ್ರಿಕ ಪರಿಣಿತಿ ಹೊಂದಿದವರಿಂದ ದೃಢೀಕರಿಸಲ್ಪಟ್ಟ ಬಟ್ಟೆಗಳನ್ನೇ ಖರೀದಿ ಮಾಡಿ, ಜಿಲ್ಲಾ ಆರೋಗ್ಯ ಅಧಿಕಾರಿಗಳ ಸಹಯೋಗದೊಂದಿಗೆ ಮುಖ್ಯ ಕಾರ್ಯನಿರ್ವಾಹ ಅಧಿಕಾರಿಗಳು, ಜಿಲ್ಲಾ

ಪಂಚಾಯತ್‌ರವರು ಉಸ್ತುವಾರಿ ನಡೆಸುವ ಮೂಲಕ ಮಾಸ್ಕ್ ತಯಾರಿಕೆಗೆ ಕ್ರಮವಹಿಸುವುದು.

17. ಜಿಲ್ಲಾ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ (ಹಿರಿಯ ನಾಗರೀಕರ ಆರೈಕೆ, ದೇವದಾಸಿ ನಿರ್ಮೂಲನೆ, ವಿಕಲಚೇತನ ಕ್ಷೇಮಾಭಿವೃದ್ಧಿ ಇತ್ಯಾದಿ) ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಘಗಳನ್ನು ಗುರುತಿಸಿ ಸದರಿಯವರ ಸೇವೆಯನ್ನು ಬಳಸಿಕೊಳ್ಳಲು ಕ್ರಮವಹಿಸುವುದು.

18. ಕೋವಿಡ್ -19 ರ ಅನುಮೋದಿತ ಐಇಸಿ ಸಂದೇಶವನ್ನು ಗ್ರಾಮೀಣ ಜನರಿಗೆ ತಲುಪಿಸಲು ನಿರ್ದೇಶಕರು, ಇ-ಆಡಳಿತ ಮುಂದಾಳತ್ವದಲ್ಲಿ ಕಾರ್ಯ ನಿರ್ವಹಿಸುವುದು.

19. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರಸ್ತೆ ಮತ್ತು ಸೇತುವೆ ದುರಸ್ತಿ ಕಾಮಗಾರಿಗಳಿಗೆ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾದ ಅನುದಾನವನ್ನು ವ್ಯಪಗತವಾಗದಂತೆ ಕೆಆರ್‌ಐಡಿಎಲ್‌ನಲ್ಲಿ ಠೇವಣಿಯಲ್ಲಿರಿಸಿ ಬಳಸಿಕೊಳ್ಳಲು ಕ್ರಮವಹಿಸುವುದು.

ವಂದನೆಗಳೊಂದಿಗೆ ವಿಡಿಯೋ ಸಂವಾದದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

27/3/2020

(ಎಲ್.ಕೆ. ಅತೀಕ್)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸಂಖ್ಯೆ: ಗ್ರಾಅಪ 59 ಯೋಉಮಾ 2020 ದಿನಾಂಕ: 27.03.2020

**ಇವರಿಗೆ:**

1. ಗ್ರಾಅಪ ಇಲಾಖೆಯ ಎಲ್ಲಾ ಆಯುಕ್ತರು, ನಿರ್ದೇಶಕರು ಹಾಗೂ ವಿಭಾಗ ಮುಖ್ಯಸ್ಥರು.

2. ನಿರ್ದೇಶಕರು, ಇ-ಆಡಳಿತ – ಸದರಿ ನಡವಳಿಯನ್ನು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
3. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
4. ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು- ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ
5. ಎಲ್ಲಾ ಗ್ರಾಮ ಪಂಚಾಯತ್‌ಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು - ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.